


**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯ ಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂಪುಟ 6, ಸಂಚಿಕೆ 5 ದ್ವೈಮಾಸಿಕ ವಾರ್ತಾಪತ್ರ ಸೆಪ್ಟೆಂಬರ್–ಅಕ್ಟೋಬರ್ 2018

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಜನವರಿ 9, 2000)

**ಅನು: ಶ್ರೀದೇವಿ**

"ಬಳಗ" ಎನ್ನುವ ಪದವನ್ನು ನಾವು ಇಡೀ ಜೀವರಾಶಿಗೆ ವಿಸ್ತರಿಸಬೇಕು. ನಾವು ಇನ್ನೊಬ್ಬ ವ್ಯಕ್ತಿಯನ್ನು ಪ್ರೀತಿಸುವುದು ಮಾತ್ರವಲ್ಲದೇ, ಈ ಭೂಮಿಯ ಮೇಲಿನ ಪ್ರತಿಯೊಂದು ಜೀವಿಯನ್ನೂ ಪ್ರೀತಿಸುತ್ತೇವೆ. ಸ್ವಾತಂತ್ರ್ಯವೆಂದರೆ, ವಿಚಾರ ಸ್ವಾತಂತ್ರ್ಯ, ಅನ್ವೇಷಿಸುವ ಸ್ವಾತಂತ್ರ್ಯ ಹಾಗೂ ನಮಗೆ ಇಷ್ಟವಾದ ರೀತಿಯಲ್ಲಿ ಬದುಕುವ ಸ್ವಾತಂತ್ರ್ಯವೆಂದು ನಮಗೆ ಈಗ ಅರಿವಾಗಿದೆ. ಈ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು. ದೇವರೂ ಕೂಡ ಇತರರ ಮೇಲೆ ಬಲವಂತವಾಗಿ ಏನನ್ನೂ ಹೇರುವುದಿಲ್ಲ. ಈ ಸ್ವಾತಂತ್ರ್ಯ ಜನ್ಮಸಿದ್ಧ ಹಕ್ಕು ಆದರೆ ಬೇರೆಯವರ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸಿದಾಗ ಈ ಸ್ವಾತಂತ್ರ್ಯ ಸರಿಯಲ್ಲ. ಆ ರೀತಿಯಲ್ಲಿ ನೋಡಿದರೆ, ನಿಜವಾಗಿಯೂ ಸ್ವಾತಂತ್ರ್ಯವೆನ್ನುವುದೇ ಇಲ್ಲ. ಇದು ಒಂದು ತಮಾಷೆಯಂತೆ, ವಿರೋಧಾಭಾಸ (paradox) ದಂತೆ ತೋರುತ್ತದೆ. ನನಗೆ ಸ್ವಾತಂತ್ರ್ಯವಿದೆಯೆಂದು ಮನಬಂದಂತೆ ನಡೆದುಕೊಳ್ಳುತ್ತಾ ಹೋಗುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ನನ್ನ ಮೇಲೆ ನಾನೇ ಹಾಕಿಕೊಳ್ಳುವ ನಿರ್ಬಂಧನೆಗಳಿವೆ, ಇತಿಮಿತಿಗಳಿವೆ. ಹೊಸಯುಗದಲ್ಲಿ, ಸಮಾನತೆ, ಬಳಗ, ಸ್ವಾತಂತ್ರ್ಯ ಇವುಗಳನ್ನು ಈ ವಿಶಾಲವಾದ ರೀತಿಯಲ್ಲಿ ನಾವು ಅರ್ಥಮಾಡಿಕೊಳ್ಳಬೇಕೆಂದು ನನಗನಿಸುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಒಂದು ಮಗುವಿಗೆ ಹೊಟ್ಟೆಯಲ್ಲಿ ತಡೆಯಲಾರದ ನೋವಿದ್ದಾಗ, ಆ ಮಗುವಿನ ಅಜ್ಜಿ ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದರು. ಕೆಲವೇ ನಿಮಿಷಗಳಲ್ಲಿ ಆ ಮಗು ನಸುನಗೆ ಬೀರಿತು. ಧ್ಯಾನಿಯೊಬ್ಬರ ಕಾರು ಹಳ್ಳವೊಂದರಲ್ಲಿ ಸಿಕ್ಕಿಕೊಂಡಾಗ, ಅವರು ಬೆಳಕನ್ನು ಪ್ರಾರ್ಥಿಸಿದರು. ಕೆಲವೇ ನಿಮಿಷಗಳಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯಿಂದ ಸಹಾಯ ದೊರೆಯಿತು. ಆ ವ್ಯಕ್ತಿ ಇನ್ನು ಕೆಲವು ಜನರ ಸಹಾಯದೊಂದಿಗೆ ಕಾರನ್ನು ಹಳ್ಳದಿಂದ ಹೊರತಂದರು. ನಂತರ, ಆ ಧ್ಯಾನಿಯು ತಮ್ಮ ಕೃತಜ್ಞತೆಯನ್ನು ಅರ್ಪಿಸಲೆಂದು ಆ ವ್ಯಕ್ತಿಗಾಗಿ ನೋಡಿದಾಗ, ಆ ವ್ಯಕ್ತಿ ಆಗಲೇ ಅಲ್ಲಿಂದ ಹೊರಟು ಹೋಗಿರುವುದು ತಿಳಿಯಿತು, ಎಲ್ಲೂ ಕಾಣಿಸಲಿಲ್ಲ!

ಬೆಳಕೇ ದೇವರು. ನಾವು ಸಂಕಷ್ಟದಲ್ಲಿದ್ದಾಗ, ಅವನ ಸಹಾಯವನ್ನು ಬೇಡುತ್ತೇವೆ. ಅವನು ಯಾವಾಗಲೂ ಪ್ರತಿಸ್ಪಂದಿಸುತ್ತಾನೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ನಮ್ಮ ಕ್ಷೇತ್ರ ಸಂಯೋಜಕರ (Area Coordinator) ನಿಖರವಾದ ಯೋಜನೆ ಹಾಗೂ ಅನೇಕ ಹೊಸ ಕಾರ್ಯಕ್ರಮಗಳಿಂದಾಗಿ ಈ ವರ್ಷ ಲೈಟ್ ಚಾನಲಿಂಗ್ ಕೆಲಸ ಬಹಳ ವೇಗವನ್ನು ಪಡೆದಿದೆ. ಅನೇಕ ವೈಯಕ್ತಿಕ ಸಮಸ್ಯೆಗಳು ಹಾಗೂ ಬಿಟ್ಟು ಬಿಟ್ಟು ಬರುವ ಮಳೆಯಿದ್ದರೂ ಸಹ ತಂಡಗಳು ಜೂನ್–ಜುಲೈ ತಿಂಗಳುಗಳಲ್ಲಿ ಅತಿ ಹೆಚ್ಚು ಶಾಲೆಗಳಿಗೆ ಭೇಟಿ ನೀಡಿವೆ. 3ನೇ ಶನಿವಾರದಂದು ನಡೆಯುವ ಸಾಮೂಹಿಕ ಲೈಟ್ ಚಾನಲಿಂಗ್‌ಅನ್ನು ಪ್ರಾರಂಭಿಸಿದವರೂ ಕೂಡ ಕ್ಷೇತ್ರ ಸಂಯೋಜಕರೇ. ನಮ್ಮ ಕಾರ್ಯಕರ್ತರು ಜೊತೆಗೂಡಿ ಕೆಲಸಮಾಡಲು ಮತ್ತು ಒಂದೇ ದಿನದಲ್ಲಿ ಅತಿಹೆಚ್ಚು ಚಾನಲಿಂಗ್ ಕೆಲಸ ಮಾಡಲು ಇದು ಸಹಾಯಮಾಡಿದೆ.

ಹಿಂಸೆ ಹಾಗೂ ದ್ವೇಷ ನಮ್ಮ ಸುತ್ತ ಇದ್ದರೂ ಕೂಡ ಪ್ರೀತಿ, ಶಾಂತಿ ಹಾಗೂ ಭರವಸೆಯ ಅನೇಕ ಘಟನೆಗಳೂ ನಡೆಯುತ್ತಿವೆ. ಪ್ರಪಂಚ ಒಗ್ಗಟ್ಟಿನಿಂದ ಉತ್ತಮ ಭವಿಷ್ಯದೆಡೆಗೆ ಸಾಗುತ್ತಿರುವಂತೆ ತೋರುತ್ತದೆ. ಹೊಸಯುಗದೆಡೆಗಿನ ಪ್ರಯಾಣ ಕಷ್ಟವೆನಿಸಿದರೂ ಅಸಾಧ್ಯವೆನಿಸುವುದಿಲ್ಲ. ಒಳ್ಳೆಯ, ಸಮೃದ್ಧಿಯ ಹಾಗೂ ಶಾಂತಿಯುತ ಪ್ರಪಂಚಕ್ಕಾಗಿ ಕಾಯೋಣ. ಅಲ್ಲಿಯ ತನಕ ಪ್ರಾರ್ಥನೆ ಮಾಡೋಣ ಹಾಗೂ ಚಾನಲ್ ಮಾಡುವುದನ್ನು ಮುಂದುವರೆಸೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಕೆ. ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶುಕ್ರವಾರ (ಮಧ್ಯಾಹ್ನ 12.00)**
ಸಿದ್ಧಿ ವಿನಾಯಕ ದೇವಸ್ಥಾನ, 59/1, ಹಚಿನ್ಸ್ ರಸ್ತೆ, 3ನೇ ಅಡ್ಡರಸ್ತೆ, ಕೂಕ್ ಟೌನ್
☎ 9980205803 ಶ್ರೀಮತಿ ನಿರ್ಮಲ ಬಾಲ

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ, 8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.



ಹಡಪ್ಸರ್‌ನಲ್ಲಿರುವ ಮಶಾಲ್ ಫೌಂಡೇಷನ್‌ನ ಶಿಕ್ಷಕರು ಜೂನ್ 28, 2018ರಂದು ಲೈಟ್ ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಶಾಂತಿ, ಆನಂದ ಹಾಗೂ ಸಂತೋಷವನ್ನು ಪಡೆಯುವುದಕ್ಕಾಗಿ ನಾವು ಧ್ಯಾನ ಮಾಡುತ್ತೇವೆ. ನಾವು ಪ್ರತಿಯೊಬ್ಬರ ಜೊತೆ ಸಮರಸವಾದ ಸಂಬಂಧವನ್ನು ಹೊಂದಿದಾಗ ಮಾತ್ರ ಇವುಗಳನ್ನು ಸಾಧಿಸಬಹುದು. ಬೇರೊಬ್ಬ ವ್ಯಕ್ತಿಯ ಮನಃಸ್ಥಿತಿಯನ್ನು ಗೌರವಿಸಬೇಕು, ಅವರ ಮಟ್ಟಕ್ಕೆ ಇಳಿದು, ಸಹಾನುಭೂತಿಯಿಂದ ಅವರನ್ನು ಅರ್ಥಮಾಡಿಕೊಳ್ಳಬೇಕು.
- ಪ್ರತಿಯೊಂದು ನಕಾರಾತ್ಮಕ ಆಲೋಚನೆ ಹಾಗೂ ಭಾವನೆಯು ಅಜ್ಞಾನದ ಇನ್ನೊಂದು ಪದರವನ್ನು ಸೇರಿಸುತ್ತದೆ.
- ವಿನಾಶ ಸೃಷ್ಟಿಯ ಇನ್ನೊಂದು ಭಾಗ. ವಿನಾಶ ಮತ್ತು ಸೃಷ್ಟಿಗಳೆರಡು ನಮ್ಮ ಜೀವನದ ಭಾಗಗಳು. ಇವು ಅಕ್ಕಪಕ್ಕದಲ್ಲೇ ಇರುತ್ತವೆ. ಹೊಸ ವಿಚಾರಗಳ ಪ್ರವೇಶಕ್ಕಾಗಿ ಹಳೆಯ ವಿಚಾರಗಳು ನಾಶವಾಗಬೇಕು.
- ಆಧ್ಯಾತ್ಮಿಕತೆಯೆಂದರೆ ಉಪವಾಸವಿರುವುದಲ್ಲ, ಒಂದು ಮೂಲೆಯಲ್ಲಿ ಕುಳಿತು, ಸಮಾಜದಿಂದ ಹೊರಗಿದ್ದು ಜೀವನವನ್ನು ನಿರಾಕರಿಸುವುದಲ್ಲ ಅಥವಾ ಬಡತನದಲ್ಲಿ ಬದುಕುವುದೂ ಅಲ್ಲ. ಅದು ಜೀವನವನ್ನು ಸಂಪೂರ್ಣವಾಗಿ ಹಾಗೂ ಸಮಗ್ರವಾಗಿ ಅನುಭವಿಸುವುದಾಗಿದೆ. ಆಧ್ಯಾತ್ಮಿಕ ವ್ಯಕ್ತಿಗಳಾಗಲು ಲೌಕಿಕ ಪ್ರಪಂಚ ಅನಗತ್ಯವೆಂದು ಭಾವಿಸಿ, ಅದರಿಂದ ದೂರವುಳಿಯಬೇಕೆಂದು ಸಾಮಾನ್ಯವಾಗಿ ಜನರು ಯೋಚಿಸುತ್ತಾರೆ. ಆದರೆ ಸುಖಭೋಗದಲ್ಲಿರುವ ವ್ಯಕ್ತಿಯೂ ಕೂಡ ಅತ್ಯಂತ ಉತ್ತಮ ಆಧ್ಯಾತ್ಮಿಕ ವ್ಯಕ್ತಿಯಾಗಬಹುದು.
- ದೇವರು ಸರ್ವಜ್ಞ. ಅವನು ಏಕಕಾಲದಲ್ಲಿ ಸೃಷ್ಟಿಯನ್ನೂ ಮಾಡುತ್ತಾನೆ ಹಾಗೂ ನಾಶವನ್ನೂ ಕೂಡ ಮಾಡುತ್ತಾನೆ. ಅವನಿಗೆ ತಾನು ಸೃಷ್ಟಿಸಿರುವ ಎಲ್ಲಾ ಪ್ರಪಂಚದಲ್ಲಿರುವ ಒಂದೊಂದು ಇರುವೆಯ ಪಿಸುಮಾತೂ ಕೂಡ ತಿಳಿಯುತ್ತದೆ.
- ನಾವು ನಮ್ಮಲ್ಲಿ ಶಾಂತಿಯನ್ನು ಬಯಸಿದರೆ ಹಾಗೂ ಆಧ್ಯಾತ್ಮಿಕವಾಗಿ ಬೆಳೆಯಲು ಬಯಸಿದರೆ, ಜೀವನದ ಕ್ಷುಲ್ಲಕ ವಿಷಯಗಳಿಗೆ ಹೆಚ್ಚಿನ ಮಹತ್ವವನ್ನು ನೀಡದಿರೋಣ. ನಾವು ಪರಮಸತ್ವದ ಮೇಲೆ ಗಮನ ಹರಿಸಬೇಕೇ ಹೊರತು ವಿವರಗಳ ಮೇಲಲ್ಲ.
- ಪ್ರೀತಿಯಲ್ಲಿ, ಕ್ಷಮೆಗೆ ಮೊದಲ ಸ್ಥಾನ. ನಾವು ಯಾವಾಗಲೂ ಕ್ಷಮಿಸಬೇಕು. ಇದು ಸುಲಭವಲ್ಲ. ಕೆಲವೊಮ್ಮೆ ನಾವು ಕಠಿಣವಾಗಿರಬೇಕು. ಏನಾದರೂ ಸರಿಯಿಲ್ಲದಿದ್ದಾಗ, ಆ ವ್ಯಕ್ತಿಗೆ ಹೇಳಬೇಕು, ಇದು ನಮಗೆ ಇಷ್ಟವಾಗಲಿಲ್ಲವೆಂದು ತೋರಿಸಬೇಕು. ಆದರೆ ನಮ್ಮ ಹೃದಯದಲ್ಲಿ ಯಾವುದೇ ನಕಾರಾತ್ಮಕ ಆಲೋಚನೆಗಳೂ ಇರಬಾರದು. ನಾವು ಯಾವಾಗಲೂ ವಿಶಾಲವಾಗಿ ಯೋಚಿಸಬೇಕು, ಭಾವಿಸಬೇಕು ಹಾಗೂ ವರ್ತಿಸಬೇಕು.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5352 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 28.48 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

# ಲೈಟ್ ಚಾನಲಿಂಗ್ ಕೇಂದ್ರಗಳು

**ಕಾರ್ತಿಕ್ ಎನ್; ಅನು: ಶ್ರೀದೇವಿ**

ಶಾಲಾ ಕಾಲೇಜುಗಳಂತಹ ವಿದ್ಯಾಸಂಸ್ಥೆಗಳು ಲೈಟ್ ಚಾನಲ್ಸ್ ವಿಶ್ವ ಸಂಚಲನದ ಬಹು ಮುಖ್ಯವಾದ ಹಾಗೂ ಬೇರ್ಪಡಿಸಲಾಗದ ಭಾಗವಾಗಿವೆ. ವಾಸ್ತವದಲ್ಲಿ, ಲೈಟ್ ಚಾನಲಿಂಗ್ ಮಕ್ಕಳಿಗಾಗಿ ಮಾತ್ರವೆಂದೂ ಹಾಗೂ ಇದನ್ನು ಶಾಲಾ ಕಾಲೇಜುಗಳಲ್ಲಿ ಮಾತ್ರವೇ ನಡೆಸಲಾಗುವುದೆಂದೂ ಅನೇಕರು ಭಾವಿಸಿದ್ದಾರೆ. ಸತ್ಯವೆಂದರೆ, ಇದರ ಅಭ್ಯಾಸವನ್ನು ಎಲ್ಲಾ ವಯೋವರ್ಗದವರೂ ಮಾಡಬಹುದಾಗಿದೆ. ಅಸಂಖ್ಯಾತ ವಯಸ್ಕರು ಪ್ರಪಂಚದ ಎಲ್ಲೆಡೆ ಲೈಟ್ ಚಾನಲ್ ಮಾಡುತ್ತಾರೆ, ಅಂಥವರ ಸಂಖ್ಯೆಯನ್ನು ಸಂಗ್ರಹಿಸಿ ಪ್ರಕಟಿಸಿಲ್ಲ ಅಷ್ಟೇ.

ಲಕ್ಷಾಂತರ ಮಕ್ಕಳು ತಮ್ಮ ಶಾಲೆಗಳಲ್ಲಿ ಒಂದೆಡೆ ಸೇರಿ ನಿಯತವಾಗಿ ಲೈಟ್ ಚಾನಲ್ ಮಾಡುತ್ತಾರೆ. ಆದರೆ, ಆ ರೀತಿಯಲ್ಲಿ ಒಂದೆಡೆ ಸೇರುವುದಕ್ಕೆ ವಯಸ್ಕರಿಗೆ ಕಷ್ಟವಾಗುತ್ತದೆ. ಅಂಥವರಿಗೆ ಅನುಕೂಲ ಮಾಡಿಕೊಡಲು, ಅನೇಕ ವರ್ಷಗಳ ಹಿಂದೆಯೇ, ಗುರೂಜಿ ಕೃಷ್ಣಾನಂದರವರು ಲೈಟ್ ಚಾನಲಿಂಗ್ ಕೇಂದ್ರಗಳ ಕುರಿತು ಆಲೋಚಿಸಿದರು. ಎಲ್ಲರಿಗಾಗಿ, ಅದರಲ್ಲೂ ದೊಡ್ಡವರಿಗಾಗಿ, ನಿಯತವಾಗಿ ಒಂದೆಡೆ ಸೇರಿ ಒಟ್ಟಿಗೆ ಲೈಟ್ ಚಾನಲ್ ಮಾಡುವ ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ಈ ಕೇಂದ್ರಗಳನ್ನು ತೆರೆಯಲಾಗಿದೆ. ಅಂತಹ ಚಾನಲಿಂಗ್ ಕೇಂದ್ರಗಳು ಹಲವಾರು ವರ್ಷಗಳಿಂದ ನಡೆಯುತ್ತಿವೆ. ಇತ್ತೀಚೆಗೆ, ಕೆಲವೊಂದು ಕೇಂದ್ರಗಳು 7 ವರ್ಷಗಳ ನಿಯತವಾದ ಚಾನಲಿಂಗ್‌ಅನ್ನು ಪೂರೈಸಿವೆ. ಇನ್ನೂ ಹಲವು ಕೇಂದ್ರಗಳೂ (ಅವುಗಳ ವಿವರವನ್ನು ಈ ಪತ್ರಿಕೆಯಲ್ಲಿ ಕೊಡಲಾಗಿದೆ) ಬಹಳ ವರ್ಷಗಳಿಂದ ನಡೆಯುತ್ತಿವೆ. ಇವುಗಳಲ್ಲದೆ, ಕೆಲವು ಸಂದರ್ಭಗಳಲ್ಲಿ, ಕೆಲವರು ತಮ್ಮ ಮನೆಗಳಲ್ಲಿ ಅಥವಾ ಕಛೇರಿಗಳಲ್ಲಿ ಜನರನ್ನು ಸೇರಿಸಿ ಲೈಟ್ ಚಾನಲ್ ಮಾಡುತ್ತಾರೆಂದು ಕೇಳಿದ್ದೇವೆ.

ಯಾರು ಬೇಕಾದರೂ ಈ ಲೈಟ್ ಚಾನಲಿಂಗ್ ಕೇಂದ್ರಗಳಿಗೆ ಬಂದು ಲೈಟ್ ಚಾನಲಿಂಗ್‌ನಲ್ಲಿ ಭಾಗವಹಿಸಬಹುದು. ಇಲ್ಲಿ ಭಾಷಣಗಳಿಲ್ಲ, ನೋಂದಣಿಗಳಿಲ್ಲ, ಒತ್ತಾಯವಿಲ್ಲ ಹಾಗೂ ಶುಲ್ಕವಿಲ್ಲ. ಯಾವುದೇ ನಿಬಂಧನೆಗಳಿಲ್ಲದೆ ಯಾರೇ ಆದರೂ ಇಲ್ಲಿಗೆ ಬಂದು, ಬೆಳಕನ್ನು ಅನುಭವಿಸಿ ಹಿಂದಿರುಗಿ ಹೋಗಲು ಅನುಕೂಲವಾಗಲೆಂಬ ಒಂದು ಮಹಾನ್ ಉದ್ದೇಶದಿಂದ ಈ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅನೇಕ ಕೇಂದ್ರಗಳಲ್ಲಿ 30 ನಿಮಿಷಗಳವರೆಗೆ ಅಭ್ಯಾಸ ಮಾಡುತ್ತಾರೆ! ಹೆಚ್ಚು ಹೊತ್ತು ಅಭ್ಯಾಸ ಮಾಡಿದರೆ, ಅನುಭವ ಆಳವಾಗಿರುತ್ತದೆ ಹಾಗೂ ಅದರ ಪ್ರಭಾವ ದೀರ್ಘಕಾಲದವರೆಗೆ ಇರುತ್ತದೆ ಎಂದು ನಮಗೆ ತಿಳಿದಿದೆ. ಈ ಕೇಂದ್ರಗಳು ಉನ್ನತ ಚೈತನ್ಯಗಳನ್ನು ಹೊಂದಿದ್ದು ಸುತ್ತಮುತ್ತಲಿನ ಪ್ರದೇಶವನ್ನು ಸಕಾರಾತ್ಮಕಗೊಳಿಸುವಲ್ಲಿ ಸಹಾಯ ಮಾಡುತ್ತವೆ.

ಮಕ್ಕಳು ಹಂಚಿಕೊಂಡಿರುವ, ಅವರ 7 ನಿಮಿಷಗಳ ಕಾಲದ ಅಭ್ಯಾಸದ ಪ್ರಯೋಜನಗಳನ್ನು, ಈ ವಾರ್ತಾಪತ್ರಿಕೆಗಳಲ್ಲಿ ಮುದ್ರಿಸಲಾಗುತ್ತದೆ. ಈ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ದೀರ್ಘಕಾಲ ಅಭ್ಯಾಸ ಮಾಡುವುದರಿಂದ, ಪ್ರಯೋಜನಗಳ ಪಟ್ಟಿಯೂ ಬೆಳೆಯುತ್ತದೆ. ಹಾಗೂ ಇದರ ಅನುಭವವು, ಅವರ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ನಿಭಾಯಿಸಲು ಪ್ರತಿಯೊಬ್ಬರಿಗೂ ಸಹಾಯ ಮಾಡುತ್ತದೆ. ಈ ಕೇಂದ್ರಗಳಿಗೆ ಬಂದನಂತರ ಅನೇಕರು ಉನ್ನತ ಆಧ್ಯಾತ್ಮಿಕ ಅಭ್ಯಾಸಗಳನ್ನು ಪ್ರಾರಂಭಿಸಿರುವುದನ್ನು ನಾವು ಗಮನಿಸಿದ್ದೇವೆ. ಈ ಕೇಂದ್ರಗಳಲ್ಲಿ ಅಭ್ಯಾಸ ಮಾಡಿದವರಿಗಾದ, ಹೀಲಿಂಗ್ ಮತ್ತು ಜೀವನವನ್ನೇ ಬದಲಾಯಿಸಿದ ಅನುಭವಗಳ ಬಗ್ಗೆ ಅನೇಕ ವರದಿಗಳಿವೆ. ಈ ಉನ್ನತವಾದ ಚೈತನ್ಯಗಳು ಕಷ್ಟಗಳನ್ನು ನಿಭಾಯಿಸಲು ಸಹಾಯ ಮಾಡುವುದು ಮಾತ್ರವಲ್ಲದೇ ನಮ್ಮ ಜೀವನದಲ್ಲಿ ಸಂತೋಷವನ್ನೂ ವೃದ್ಧಿಸುತ್ತವೆ!

ಈ ಲೈಟ್ ಚಾನಲಿಂಗ್ ಕೇಂದ್ರಗಳು, ಲೈಟ್ ಚಾನಲ್ಸ್ ವಿಶ್ವ ಸಂಚಲನದಲ್ಲಿ ಸದ್ದಿಲ್ಲದ ಹಾಗೂ ಮಹತ್ವಪೂರ್ಣವಾದ ಪಾತ್ರ ವಹಿಸುತ್ತವೆ. ಅಂತಹ ಲೈಟ್ ಚಾನಲಿಂಗ್ ಕೇಂದ್ರಗಳು ಮುಂಬರುವ ದಿನಗಳಲ್ಲಿ ಪೂಜಾ ಮಂದಿರಗಳಾಗುತ್ತವೆ; ದೇವರ ಜೊತೆ, ಬೆಳಕಿನ ಜೊತೆ ತಮ್ಮ ವೈಯಕ್ತಿಕ ಸಂಪರ್ಕವನ್ನು ಅನುಭವಿಸಲು ಎಲ್ಲಾ ಮತಧರ್ಮದವರೂ ಇಲ್ಲಿ ಒಟ್ಟಿಗೆ ಸೇರಬಹುದಾಗಿದೆ. ಮುಂಬರುವ ದಿನಗಳಲ್ಲಿ ಅಂತಹ ಅನೇಕ ಕೇಂದ್ರಗಳನ್ನು ತೆರೆಯಲಾಗುತ್ತದೆ. ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳೂ ಕೂಡ ತನ್ನದೇ ಆದ ರೀತಿಯಲ್ಲಿ, ಅಪೂರ್ವವಾದ ಹಾಗೂ ವಿಶೇಷವಾದ ಲೈಟ್ ಚಾನಲಿಂಗ್ ಕೇಂದ್ರಗಳೇ ಆಗಿವೆ.

ನಮ್ಮ ಜೊತೆಯಲ್ಲಿ ಬನ್ನಿ! ಈ 'ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ' ನಮ್ಮನ್ನು ಜೊತೆಗೂಡಿ ಹಾಗೂ ದೇವರೊಂದಿಗಿನ ನಿಮ್ಮ ಸಂಬಂಧವನ್ನು ಗಾಢವಾಗಿಸಿಕೊಳ್ಳಿ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಸೋಮವಾರ ಮತ್ತು ಗುರುವಾರ (ಸಂಜೆ 7 - 7.15)**
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಮೀರಜ್

**ಗುರುವಾರ (ಸಂಜೆ 7.45)**
ಶ್ರೀ ಶಿವರುದ್ರ ಬಿ. ಬೆಲಗನ್ವಿ,
A-Gat Plot No-135,
C/o ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
☎ 9822421463 ಶ್ರೀ ಮಹಾಜನ್

### ಚೆನ್ನೈ

**ಶನಿವಾರ (ಬೆಳಿಗ್ಗೆ 10 - 10.30)**
ನಂ. 481, ಸಾಯಿಪ್ರೇಮ್, 19ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 7 - 7.30)**
3-B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ
☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.









# ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ನನ್ನ ಮಗ ಇಂಟರ್‌ಮೀಡಿಯಟ್ ಎರಡನೆಯ ವರ್ಷದಲ್ಲಿ ಓದುತ್ತಿದ್ದಾನೆ. ಸ್ಟೇಟ್ ಬೋರ್ಡ್ ನಡೆಸಿದ ಇಂಟರ್ ಮೀಡಿಯಟ್ ಮೊದಲನೆಯ ವರ್ಷದ ಪರೀಕ್ಷೆಯಲ್ಲಿ ಶೇಕಡಾ 98 ಅಂಕಗಳನ್ನು ಪಡೆದು ಪಾಸಾಗಿದ್ದಾನೆ. ಎಲ್ಲಾ ಪರೀಕ್ಷೆಗಳ ಸಮಯದಲ್ಲಿ ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು, ಅವನು ಲೈಟ್ ಚಾನಲಿಂಗ್ ಮಾಡಿದ್ದಾನೆ. ಪ್ರತಿ ದಿನ ನಮ್ಮ ಮನೆಯಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿರುವುದರಿಂದ, ಅವನು ಅದೇ ಸಕಾರಾತ್ಮಕತೆಯನ್ನು ಬೆಳೆಸಿಕೊಂಡು ಬಂದಿದ್ದಾನೆ. ಕಡಿಮೆ ಪ್ರಯತ್ನದಿಂದಲೇ ಉತ್ತಮ ಫಲಿತಾಂಶ ಪಡೆಯುವುದಕ್ಕೆ ಅವನಿಗೆ ಸಾಧ್ಯವಾಯಿತು. ಗುರೂಜಿಯವರ ಆಶೀರ್ವಾದಕ್ಕಾಗಿ ನಾನು ವಿನೀತಳಾಗಿದ್ದೇನೆ.

–ಜಯಶ್ರೀ ವಾಸುದೇವ್, ಲೈಟ್ ಚಾನಲ್

ಕಳೆದ ತಿಂಗಳು ನನಗೊಂದು ಬಹಳ ಮುಖ್ಯವಾದ ಕೆಲಸ ಇತ್ತು. ಆ ಮೀಟಿಂಗ್‌ಗೆ ಹೋಗಲು ನನ್ನ ಮೋಟಾರ್ ಬೈಕ್‌ನಲ್ಲಿ ಪ್ರಯಾಣಿಸಿದೆ. ನಾನು ಹೊಸೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗುತ್ತಿದ್ದಾಗ, ರಸ್ತೆಯ ಮಧ್ಯದಲ್ಲಿಯೇ ಮೋಟಾರ್ ಬೈಕ್ ತಕ್ಷಣ ಕೆಟ್ಟು ನಿಂತಿತು. ನಂತರ ರಸ್ತೆಯ ಬದಿಗೆ ಮೋಟಾರ್ ಬೈಕ್‌ಅನ್ನು ತಳ್ಳಿಕೊಂಡು ಹೋಗಿ ಏನಾಗಿದೆ ಎಂದು ಪರೀಕ್ಷಿಸಲು ಪ್ರಯತ್ನಿಸಿದೆ. ಸುಮಾರು 20 ನಿಮಿಷಗಳವರೆಗೆ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಇದರ ಜೊತೆಗೆ ನಾನು ಜ್ವರದಿಂದ ಬಳಲುತ್ತಿದ್ದೆ, ನಾನು ಆಫೀಸ್ ಕೆಲಸ ಕುರಿತಾಗಿ ಚಿಂತೆಗೆ ಒಳಗಾದೆ. ಹತ್ತಿರದ ಗ್ಯಾರೇಜ್‌ಗೆ ಅಥವಾ ಮುಂದಿನ ಹಳ್ಳಿಗೆ ಹೋಗಬೇಕಾದರೆ 3 ಕಿಲೋಮೀಟರ್‌ಗಳಷ್ಟು ತಳ್ಳಿಕೊಂಡು ಹೋಗಬೇಕೆಂದು ನನಗೆ ತಿಳಿದಿತ್ತು. ನಾನು ಸಹಾಯಕ್ಕಾಗಿ ಬೆಳಕನ್ನು ಪ್ರಾರ್ಥಿಸಿದೆ. ಸುಮಾರು 50 ಮೀಟರ್‌ಗಳಷ್ಟು ದೂರ ಮೋಟಾರ್ ಬೈಕ್‌ನ್ನು ತಳ್ಳಿಕೊಂಡು ಹೋಗುತ್ತಿದ್ದಂತೆ, ಒಬ್ಬ ವ್ಯಕ್ತಿ ನನ್ನ ಮುಂದೆ ಬಂದು ಸಹಾಯ ಮಾಡಿದರು. ಯಾವುದೇ ಉಪಕರಣವಿಲ್ಲದೆ ರಿಪೇರಿ ಮಾಡಿದರು. ನನ್ನ ಮೋಟಾರ್ ಬೈಕ್ ಸ್ಟಾರ್ಟ್ ಆಗಿ ಸಲೀಸಾಗಿ ಓಡುವಂತಾಯಿತು. ಸ್ವಲ್ಪ ದೂರ ಸಾಗುತ್ತಿದ್ದಂತೆ, ನನ್ನ ಅರಿವಿಗೆ ಬಂತು – ರಸ್ತೆ ಉದ್ದಕ್ಕೂ ಯಾರೂ ಇರಲಿಲ್ಲ, ನನ್ನ ಪ್ರಾರ್ಥನೆಯ ನಂತರ ಎಲ್ಲಿಂದಲೋ ಒಬ್ಬ ವ್ಯಕ್ತಿ ಬಂದು ಸಹಾಯ ಮಾಡಿದರು! ನಿಗದಿತ ಸಮಯಕ್ಕೆ ಮುಂಚಿತವಾಗಿ ನಾನು ಹೋಗಬೇಕಾದ ಸ್ಥಳ ಸೇರಿದೆ.

–ರಾಜನ್ ಆರ್.ಎಸ್.ಡಿ, ಲೈಟ್ ಚಾನಲ್

ವೈ–ಫೈ ಸೌಲಭ್ಯ ಎರಡು ತರಂಗಾಂತರಗಳಲ್ಲಿ–2.4 Ghz ಮತ್ತು 5 Ghz ಸಿಗುತ್ತಿದೆ. ನನ್ನ ಮನೆಯ ವೈ–ಫೈ ರೂಟರ್ ಕೇವಲ 2.4 Ghz ತರಂಗಕ್ಕೆ ಮಾತ್ರ ಸ್ಪಂದಿಸುತ್ತಿತ್ತು. ಬ್ಯಾಟರಿ ಬದಲಾಯಿಸಿದ ನಂತರವೂ, ನನ್ನ ಮೊಬೈಲ್ ಫೋನ್ 2.4 Ghz ವೈ–ಫೈ ಸಿಗ್ನಲ್ ಪಡೆಯುವುದರಲ್ಲಿ ವಿಫಲವಾಗಿತ್ತು. ಇದರ ಅರ್ಥ ನಾನು ಹೊಸ ಫೋನ್ ಖರೀದಿಸಬೇಕೆಂದಾಗಿತ್ತು. ನಾನು ಋಷಿಗಳನ್ನು ಪ್ರಾರ್ಥಿಸಿ, ನನ್ನ ಮೊಬೈಲ್ ಫೋನಿಗೆ ಬೆಳಕನ್ನು ಕಳಿಸಿದೆ, ಕಾರಣ ನನಗೆ ಮತ್ತೆ ಹೊಸ ಸ್ಮಾರ್ಟ್ ಫೋನ್ ಖರೀದಿಸುವ ಆಸೆ ಇರಲಿಲ್ಲ. ಇದಕ್ಕಾಗಿ ಸಹಾಯ ಕೇಳಿದೆ. ಮರುದಿನವೇ ನನ್ನ ಇಂಟರ್‌ನೆಟ್ ಸೇವಾದಾರರು ನನಗೆ ಕರೆಮಾಡಿ, ನನ್ನ ಮನೆಯ ಬ್ರಾಡ್‌ಬ್ಯಾಂಡ್ ಪ್ಲಾನ್‌ಅನ್ನು ಉನ್ನತಿಗೊಳಿಸಬೇಕಿದೆಯೆಂದು ಹೇಳಿದರು. ಈ ಉನ್ನತೀಕರಣದಲ್ಲಿ ಹೊಸ ರೂಟರ್ ಅಳವಡಿಕೆಯೂ ಸೇರಿತ್ತು, ಹೀಗಾಗಿ ನನಗೆ 5 Ghz ಸಿಗ್ನಲ್ ಉಚಿತವಾಗಿ ಸಿಕ್ಕಿತು!

–ವಿನಮ್ರ ಲೋಂಗಾನಿ, ಲೈಟ್ ಚಾನಲ್

ಲೈಟ್ ಚಾನಲಿಂಗ್‌ನಲ್ಲಿ ನಂಬಿಕೆ ಇರುವವರಿಗೆ, ಜೀವನದಲ್ಲಿ ಯಶಸ್ವಿಯಾಗಲು ಅದು ಖಂಡಿತವಾಗಿ ಸಹಾಯ ಮಾಡುತ್ತದೆ. ಅನೇಕ ವೇಳೆ ನನಗೆ ಇದರ ಅನುಭವವಾಗಿದೆ. ಇದು ನನಗೆ ಶಕ್ತಿ ಮತ್ತು ಉತ್ಸಾಹವನ್ನು ನೀಡುತ್ತದೆ ಹಾಗೂ ಅನೇಕ ವಿಷಯಗಳಲ್ಲಿ ಸಾಧನೆ ಮಾಡಲು ಪ್ರೇರೇಪಿಸಿದೆ. ಒಂದೆರಡು ನಿಮಿಷಗಳು ಬೆಳಕಿನ ಜೊತೆ ಸಂಪರ್ಕ ಪಡೆದರೆ ಸಾಕು, ಶೀಘ್ರದಲ್ಲಿಯೇ ನಾವು ಉಲ್ಲಾಸಿತರಾಗುತ್ತೇವೆ. ನಮ್ಮ ದಿನ ನಿತ್ಯದ ಕೆಲಸ ಕಾರ್ಯಗಳಿಗೆ ಲೈಟ್ ಚಾನಲಿಂಗ್ ಒಂದು ಚಾರ್ಜರ್‌ನಂತೆ ಕೆಲಸ ಮಾಡುತ್ತದೆ. ನನ್ನ ಮನೆಯ ಹತ್ತಿರವಿರುವ ಕೆಲವು ಸ್ನೇಹಿತರು ವಿದ್ಯಾಭ್ಯಾಸದಲ್ಲಿ ಹಿಂದುಳಿದಿದ್ದರು. ಅವರ ಶಿಕ್ಷಕರು ಕಲಿಸಿದ ವಿಷಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಗ್ರಹಿಸುವುದಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲವೆಂದು ನನಗೆ ಹೇಳಿದರು. ಲೈಟ್ ಚಾನಲಿಂಗ್ ತಂತ್ರದ ಬಗ್ಗೆ ನಾನು ಅವರಿಗೆ ತಿಳಿಸಿದೆ. ಈಗ ಅವರು ತಮ್ಮ ಪರೀಕ್ಷೆಗಳಲ್ಲಿ ಶ್ರೇಷ್ಠ ದರ್ಜೆಯನ್ನು ಪಡೆಯುತ್ತಿದ್ದಾರೆ! ಈ ಸುಧಾರಣೆಯನ್ನು ಕಂಡ ಶಿಕ್ಷಕರು ಇವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ಎಂದು ಕೂಡ ಹೇಳಿದರು.

–ಭೂಮಿಕ ಬಿ ಜೆ, 10ನೇ ತರಗತಿ, ಕ್ಯಾನನ್ ಕ್ರೈಸ್ಟ್ ಪಬ್ಲಿಕ್ ಸ್ಕೂಲ್, ಬಿ ಟಿ ಎಮ್ ಲೇಔಟ್, ಬೆಂಗಳೂರು

ನಾನು ಬೆಂಗಳೂರು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ, ಬಹುತೇಕ ಎಲ್ಲಾ ಶನಿವಾರಗಳಂದು ನಾವು ಶಾಲೆಯಲ್ಲಿ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೆವು. ಅರ್ಧ ವಾರ್ಷಿಕ ಮತ್ತು ಕೊನೆಯ ಪರೀಕ್ಷೆಗಳಿಗೆ ಮುಂಚೆ, ವಿದ್ಯಾಭ್ಯಾಸದಲ್ಲಿ ಹೆಚ್ಚು ಗಮನಹರಿಸಬೇಕಾಗಿರುವುದರಿಂದ, ಆ ಸಮಯದಲ್ಲಿಯೂ ಕೂಡ ಈ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದೆವು. ನಮ್ಮದು ಬಹಳ ಗಲಾಟೆಯ ತರಗತಿ. ಲೈಟ್ ಚಾನಲ್ ಮಾಡಿದ ದಿನಗಳಂದು ನಾವು ತುಂಬಾ ಶಾಂತತೆಯಿಂದ ಮತ್ತು ಸಮಾಧಾನದಿಂದ ಇರುತ್ತಿದ್ದೆವು. ಅಂತಹ ದಿನಗಳಂದು ನಮ್ಮ ಶಿಕ್ಷಕರು ನಮ್ಮ ತರಗತಿಯನ್ನು ಪ್ರೀತಿಸುತ್ತಿದ್ದರು! ಲೈಟ್ ಚಾನಲಿಂಗ್ ತುಂಬಾ ಸಹಾಯ ಮಾಡುತ್ತದೆ.

ಐದು ತಿಂಗಳುಗಳ ನಂತರ ನಾನು ಲೈಟ್ ಚಾನಲ್ ಮಾಡಿದೆ. ಇದೊಂದು ಅದ್ಭುತವಾದ ಅನುಭವವಾಗಿತ್ತು. ನನ್ನೊಳಗೆ ಬೆಳಕು ಪ್ರವೇಶಿಸುತ್ತಿರುವಂತೆ ಭಾಸವಾಯಿತು ಹಾಗೂ ಎಲ್ಲಾ ರೀತಿಯ ಅಂಧಕಾರ, ಭಯ ಮತ್ತು ಕೋಪ ನನ್ನಿಂದ ಹೊರಗೆಹೋದಂತೆ ಅನುಭವವಾಯಿತು. ನನ್ನ ಸಾಮರ್ಥ್ಯಗಳನ್ನು ನನಗೆ ತೋರಿಸಿಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳು.

–ಜಾಹ್ನವಿ ಸಿಂಗ್, ಪ್ರಥಮ ಪಿ ಯು ಸಿ, ಎನ್ ಎಮ್ ಕೆ ಆರ್ ವಿ ಕಾಲೇಜ್, ಜಯನಗರ, ಬೆಂಗಳೂರು

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ